

# ಕ್ಯಾನ್ಸರ್‌ಗೆ ಅಳಿವುಂಟು; ಛಲ-ಮನೋಬಲಕ್ಕೆ ಅಳಿವಿಲ್ಲ!

ದೇಹದ ಯಾವುದೇ ಭಾಗವನ್ನು ಕ್ಯಾನ್ಸರ್ ಬಾಧಿಸಿದರೂ ವ್ಯಕ್ತಿ ಕಂಗಾಲಾಗುವುದು ಸಹಜ. ಈ ಆತಂಕ ಹಾಗೂ ಸಂಕಟ 'ಸ್ತನ ಕ್ಯಾನ್ಸರ್' ವಿಷಯದಲ್ಲಿ ಮತ್ತೂ ಹೆಚ್ಚು. ಹೆಣ್ಣಿನ ಆತ್ಮವಿಶ್ವಾಸ, ಸೌಂದರ್ಯದೊಂದಿಗೆ ಹೆಣ್ತನದ ಸಂಕೇತದ ರೂಪದಲ್ಲೂ ಸ್ತನವನ್ನು ನೋಡುವ ಮನೋಧರ್ಮ ಬಹುಜನರಲ್ಲಿ ಇರುವುದರಿಂದ, ಸ್ತನಕ್ಕೂ ತಾಯ್ತನಕ್ಕೂ ತಳುಕು ಹಾಕಿರುವುದರಿಂದ, ಸ್ತನದ ಕ್ಯಾನ್ಸರ್ ಮಹಿಳೆಯರನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ತೀವ್ರವಾಗಿ ಗಾಸಿಗೊಳಿಸುತ್ತದೆ. ಈಗ ಕಾಲ ಬದಲಾಗಿದೆ. ಚಿಕಿತ್ಸಾ ವಿಧಾನದಲ್ಲಿ ಸುಧಾರಣೆಯಾಗಿದೆ. ಸ್ತನಕ್ಕೆ ಹೆಚ್ಚಿನ ಹಾನಿ ಉಂಟುಮಾಡದ, ವಿರೂಪಗೊಂಡರೂ ಆದನ್ನು ಪುನರ್ ರೂಪಿಸುವ ಚಿಕಿತ್ಸೆ ಈಗ ಲಭ್ಯ. ಚಿಕಿತ್ಸೆಯ ಜೊತೆಗೆ ಸಮಾಜದ ಮನೋಧರ್ಮವೂ ಬದಲಾದಲ್ಲಿ ಸ್ತನ ಕ್ಯಾನ್ಸರ್ ವಿರುದ್ಧದ ಸಂತ್ರಸ್ತರ ಹೋರಾಟ ಹೆಚ್ಚಿನ ಯಶಸ್ಸು ಪಡೆಯಬಲ್ಲದು. ಸ್ತನ ಕ್ಯಾನ್ಸರ್ ಬಾಧೆಯನ್ನು ಯಶಸ್ವಿಯಾಗಿ ಎದುರಿಸಿ, ಹೊಸ ಬದುಕನ್ನು ಕಟ್ಟಿಕೊಂಡಿರುವ ಆತ್ಮವಿಶ್ವಾಸದ ಮಹಿಳೆಯರ ಕಥನಗಳ ಈ ವಿಶ್ಲೇಷಣೆ, ಸಂತ್ರಸ್ತ ಹೆಣ್ಣುಮಕ್ಕಳಲ್ಲಿ ಜೀವನೋತ್ಸಾಹ ತುಂಬುವಂತಿದೆ ಹಾಗೂ ಕೌಟುಂಬಿಕ–ಸಾಮಾಜಿಕ ಚಿಂತನಾಕ್ರಮದ ಬದಲಾವಣೆಗೆ ಒತ್ತಾಯಿಸುವಂತಿದೆ.

■ ಉಮಾ ಅನಂತ್